Regd No B G 165 19-1-1970

SATYAVADI Daily, MYSORE 4 53 rd Year of Publication

Golden Jubilee Celebrated Paper

ಸತ್ಯವಾದಿ

ಸುವರ್ಣ ಮಹೋತ್ಸವ ಸಂಪೂರ್ಣಗೊಳಿಸಿದ ಪತ್ರಿಕೆ

ಸ್ಥಾಪಕರು: ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾವ್ ಸಂಪಾದಕ : ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣ ರಾವ್ [2 ಪೈಸೆ

ಅಖಿಲ ಭಾರತ ಮುಸಿಂ ಸಮ್ಮೇಳನ ಪ್ರತಿಬಂಧಕಕ್ಕೆ ಒತ್ತಾಯ

22100 ಚಿನ್ನ ವಶ

ಬೊಂಬಾಯಿ— ರೂ 4 ಲಕ್ಷ ಬೆಲೆಯ 22100 ಚಿನ್ನವನ್ನು ಕಸ್ಟಂಸಿನವರು ಒಂದು ಮನೆಯಲ್ಲಿ ವಶಪಡಿಸಿಕೊಂಡು ಅಲ್ಲಿದ್ದ ಇಬ್ಬರನ್ನು ಪ್ರಶ್ನಿಸಲು ನಿಲ್ಲಿಸಿಕೊಂಡರು.

○

ಪಾರ್ಲಿಮೆಂಟು ಸದಸ್ಯರ ಬಂಧನ

ಲಂಡ್— ಗೂಢಚರ್ಯೆ ಆಪಾದನೆಗಾಗಿ ದಸ್ತಗಿರಿ ಮಾಡಲ್ಪಟ್ಟಿರುವ, 16 ವರ್ಷಗಳಿಂದ ಪಾರ್ಲಿಮೆಂಟು ಸದಸ್ಯರಾಗಿರುವ ವಿಲಿಯಂ ಓರ್ವರನ್ನು ಮ್ಯಾಜಿಸ್ಟ್ರೇಟರು ರಿಮಾಂಡು ಮಾಡಿದರು.

★

ಕಾಂಗ್ರೆಸ್ ಚುನಾವಣಾ ಗುರುತು

ನವದೆಹಲಿ— ನೊಗಹಿರುವ ಜೋಡೆತ್ತಿರುವ ಕಾಂಗ್ರೆಸ್ಸಿನ ಚುನಾವಣಾ ಗುರುತಿನ ವಿಷಯದಲ್ಲಿ ಚುನಾವಣಾಧಿಕಾರಿಗಳು 22 ನೇ ತಾರೀಖು ನಡೆಸುವ ವಿಚಾರಣೆಗೆ ಹಳೆ ಕಾಂಗ್ರೆಸ್ಸಿನವರು ಹೋಗಲಿರುವರು.

○

ಚಂಡೀಘಡ ಸಮಸ್ಯೆ

ನವದೆಹಲಿ— ಚಂಡೀಘರ ಸಮಸ್ಯೆ ಬಗ್ಗೆ ಪಂಜಾಬು, ಹರಯಾಣ, ಚಂಡೀಘರ್ ಕೇಂದ್ರ ಪ್ರದೇಶದ ನಿಯೋಗಗಳು ಪ್ರಧಾನಿಯವರೊಡನೆ ಚರ್ಚಿಸಿದರು

●

ಕ್ರೈಸ್ತ ಮುಸ್ಲಿಂ ಮಂತ್ರಿಗಳ ವಿವಾಹ

ಜಾರ್ಜ್‌ಟೌನ್— ಪ್ರಧಾನಿ ಫೋಬ್ಸ್ ಬರ್ನಹ್ಯಾಂ ರವರ ನಿವಾಸದ ಬೈಲುಪ್ರದೇಶದಲ್ಲಿ ಇಬ್ಬರು ಗಯಾನೀಸ್ ಮಂತ್ರಿಗಳ ಹೆಮಿಲ್ಟ್ ಗ್ರೀನ್ ಮತ್ತು ಷಿರ್ಲಿ ರಿಡ್ಲೆಯವರ ವಿವಾಹ ಆಡಂಬರವಾಗಿ ನಡೆಯಿತು.

○

ಅತಿ ಎತ್ತರದ ಮನುಷ್ಯ

ಕಟಕ್— ಇಲ್ಲಿನ ಡೆಯುತ್ತಿರುವ ವ್ಯಾಯಾಮ ಪ್ರದರ್ಶನಗಳಲ್ಲಿ ಭಾಗವಹಿಸಿರುವ ಸುನೀಲ ಪಾಂಡೆ ಎಷ್ಟ್ಯಾದಲ್ಲೇ ಅತಿ ಎತ್ತರವಾದ ಮತ್ತು ವಿಶ್ವದಲ್ಲಿ ಎರಡನೇ ಅತ್ಯಂತ ಎತ್ತರದ ಮನುಷ್ಯನೆಂದೂ ಹೇಳಲಾಗಿದೆ – ಈತನು 7 ಅಡಿ 4 ಅಂಗುಲ ಎತ್ತರವಿದ್ದು 300 ಪೌಂಡು ತೂಕವಿದ್ದಾನೆ

★

7000 ಜನ ಸತ್ತರು

ಲಂಡ್— ಕಳೆದ ಡಿಸೆಂಬರಿನಿಂದ ಸ್ಲಾ ಖಾಯಿಲೆಯಿಂದ 7000 ಸಾವುಗಳಾಗಿವೆಯೆಂದು ಆರೋಗ್ಯ ಮಂತ್ರಿಗಳು ತಿಳಿಸಿರುವರು.

○

ಷೋಕಾಸ್ ನೋಟೀಸು

ಮೈಸೂರು— ಪಿಎಸ್ಪಿ ಸದಸ್ಯರಾದ ಶ್ರೀ ಬಿಕೆ ಪುಟ್ಟಯ್ಯ, ಶ್ರೀ ವೇದಾಂತಂ ಹೆವ್ಮಿಗೆ. ಶ್ರೀ ಚಿಕ್ಕರಂಗಸ್ವನವರು ಪೌರ ಸಭಾಧ್ಯಕ್ಷ ಚುನಾವಣೆಯಲ್ಲಿ ಪಾರ್ಟಿ ನಿರ್ಧಾರದ ವಿರುದ್ಧ ವರ್ತಿಸಿದ್ದಕ್ಕಾಗಿ ಷೋಕಾಸ್ ನೋಟೀಸು ಕೊಡಲಾಗಿದೆ.

★

ದಾನಕ್ಕಾಗಿ ಗುಂಪೇಗುಂಪು

ನ್ಯೂಯಾರ್ಕ್ – 21 ವರ್ಷದ ಮಾರ್ಸ್ಕಿ ಮಿಲಿನಿಯರ್ ಮಿಕಲ್ ಜೇನ್ಸ್ ಬ್ರೋಡಿ, ಜೂನಿಯರ್, ತನ್ನ 25 ಮಿಲಿಯ ಡಾಲರ್ (ರೂ 18.75 ಕೋಟಿ) ದಾನಮಾಡುವದಾಗಿ ತಿಳಿಸಲು ಅವರ ಕಛೇರಿ ಹೊರಗೆ, ತಮಗೂ ಸ್ವಲ್ಪ ಸಿಗುವುದೆಯೆಂದು ಅಗಾಧ ಗುಂಪೇಗುಂಪು ಸೇರಿತು – ಅದಕ್ಕಾಗಿ ಅವರು ಮುಸಿಯಾಗಿದ್ದಾರೆ – ಅವರೂ ಅವರ ಪತ್ನಿಯವರು ಈಗಾಗಲೇ 600000 ಡಾಲರು (ರೂ 450000) ವಿವಿಧ ರೀತಿಯಲ್ಲಿ ದಾನ ಮಾಡಿದ್ದಾರೆ.

ತಿನ್ನಲು ಯೋಗ್ಯವಾದ ಎಣ್ಣೆ

ನವದೆಹಲಿ— ದೇಶದಲ್ಲಿ ತಿನ್ನಲು ಯೋಗ್ಯವಾದ ಎಣ್ಣೆ ಆಭಾವ ತಪ್ಪಿಸಲು ಆದನ್ನು ಹೆಚ್ಚು ಆಮದು ಮಾಡಿಕೊಳ್ಳುವ ಕಾರ್ಯಕ್ರಮವನ್ನು ಕೇಂದ್ರ ಸರಕಾರ ಹೊಂದಿದೆ.

○

ಜಾಕ್ ಪಾಟ್

ಮದರಾಸು— ನಿನ್ನೆ ಕುದುರೆ ಜೂಜಿನಲ್ಲಿ ಜಾಕ್‌ಪಾಟ್‌ನಲ್ಲಿ 3 ಟಿಕೀಟುಗಳಿಗೆ ತಲಾ ರೂ 106314 ದೊರೆಯಿತು.

★

ಬೆಲೆಕಟ್ಟುವವರು

ನವದೆಹಲಿ— ವ್ಯವಸಾಯ ಭೂಮಿಗಳ ಬೆಲೆ ಕಟ್ಟುಲು ಬೆಲೆ ಕಟ್ಟುವವರನ್ನು ನೇಮಿಸಲು ಸರ್ಕಾರ ಯೋಜಿಸಿದೆ.

★

ಡಿ ವಿ ಜಿ

ಬೆಂಗಳೂರು— 81 ವರ್ಷ ತುಂಬಿದ ಡಾ|| ಡಿ ವಿ ಗುಂಡಪ್ಪನವರನ್ನು ಅಭಿನಂದಿಸಲು ನಿನ್ನೆ ಟೌನ್ ಹಾಲಿನಲ್ಲಿ ಸಮಾರಂಭ ನಡೆಯಿತು – ಅವರ ವಿವಿಧ ಸೇವಾ ಕಾರ್ಯಗಳನ್ನು ಪ್ರಶಂಸಿಸಲಾಯಿತು – ರೂ 90 ಸಾವಿರ ನಿಧಿಯನ್ನು ಗಂಧದಮರದ ಕ್ಯಾಸ್ಕೆಟ್ಟಿನಲ್ಲಿಟ್ಟು ಕೊಡಲಾಯಿತು.

○

ಮೋಸ

ಬಿಜಾಪುರ— ರೂ 48 ಪೆರ್ಷ ತೆಗೆದುಕೊಂಡು ಮನೆಗೆ ಬರುತ್ತಿದ್ದ ನಿವೃತ್ತ ಪೋಲೀಸು ಸಬ್ ಇನ್ಸ್‌ಪೆಕ್ಟರ್ ಶ್ರೀ ತೋಬಿಯವರನ್ನು ಅಡ್ಡಕಟ್ಟಿ ಆ ಹಣ ಅಪಹರಿಸಿದ ಘೋಲಾಪುರದ ಪೀರ್‌ಸಾಹೇಬ್‌ಗೆ 3 ತಿಂಗಳು ಕಠಿಣ ಸಜಾ ವಿಧಿಸಲಾಗಿದೆ.

★

ಮುಸ್ಲಿಂ ಸಮ್ಮೇಳನ ಪ್ರತಿಬಂಧಿಸಬೇಕು

ಶಿವಮೊಗ್ಗ– ಬಾದ್‌ಷಾಹ್ ಖಾನ್ ಏರ್ಪಡಿಸುತ್ತಿರುವ ಅಖಿಲ ಭಾರತ ಮುಸ್ಲಿಂ ಸಮ್ಮೇಳನವನ್ನು ಪ್ರತಿಬಂಧಿಸಬೇಕೆಂದು ಸ್ಥಳೀಯ ಹಿಂದೂಮಹಾಸಭೆಯು ಕೇಂದ್ರ ಸರಕಾರವನ್ನು ಒತ್ತಾಯಮಾಡಿದೆ.

●

ಸ್ಪಷ್ಟ ವಿವರಣೆ

ಬೊಂಬಾಯಿ— ಪಾರ್ಲಿಮೆಂಟಿನ, ರಾಜ್ಯ ಶಾಸನಸಭೆಗಳ, ಸದಸ್ಯರ, ಸಮಿತಿಗಳ ಅಧಿಕಾರ, ಹಕ್ಕುಬಾಧ್ಯತೆ, ವಿನಾಯಿಗಳನ್ನು ಸ್ಪಷ್ಟವಾಗಿ ವಿವರಿಸಬೇಕೆಂದು ಉಪರಾಷ್ಟ್ರಾಧ್ಯಕ್ಷ ಶ್ರೀ ಪಾಠಕ್ ಹೇಳಿದರು.

★

ಘೇರಾವೋ

ಕಲ್ಕತ್ತಾ— ಶುಕ್ರವಾರದಿಂದ ಫರಾಕ ಪೋಲೀಸು ಸ್ಟೇಷನ್ನನ್ನು 500 ಕಾರ್ಮಿಕರು ಅಪೂರ್ಣ ಘೇರಾವೋ ಮಾಡಿರುವರು – ಅಲ್ಲಿಯ ಸಾಮಾಜಿಕೆಟ್ಟಿನಲ್ಲಾದ ಕಳ್ಳತನಗಳಿಗಾಗಿ ಅಲ್ಲಿಯ ಎಕ್ಸಿಕ್ಯುಟಿವ್ ಎಂಜಿನಿಯರ್ ಮತ್ತಿತರ ಟ್ರಿದಸ್ಥರಿಗೆ ದಸ್ತಗಿರಿಯಾಗಬೇಕೆಂಬುದೇ ಅವರ ಕೇಳಿಕೆ.

★

ಅಂತರಾಷ್ಟ್ರೀಯ ಹಾಕಿ ಪಂಥ್

ಬೊಂಬಾಯಿ— 16 ದಿನಗಳ 7 ರಾಷ್ಟ್ರಗಳ ಅಂತರ್ರಾಷ್ಟ್ರೀಯ ಹಾಕಿ ಪಂಥದಲ್ಲಿ ಪಶ್ಚಿಮ ಜರ್ಮನಿ ವಿಜಯಗೊಂಡಿತು.

○

ದೇವಾಲಯದ ಗೋಪುರ

ಶಿವಮೊಗ್ಗ— ಕೋಟೆ ಸೀತಾರಾಮಾಂಜನೇಯ ದೇವಾಲಯದ ಮಹಾಗೋಪುರವನ್ನು ಮಾರ್ಚಿ 5 ರಂದು ಪೇಜಾವರ ಮಠದ ಸ್ವಾಮಿಗಳವರು ಉದ್ಘಾಟಿಸುವರು.

ಅ ಹಿ ಂ ಸೆ

ಇದೊಂದು ಪುರಾತನ ಕಥೆ. ನಾರದರು ಒಂದು ದಿನ ಒ ಂ ದು ಗ್ರಾ ಮ ದ ಮೂಲಕ ಹೋಗುತ್ತಿದ್ದಾಗ, ಅವರ ಹಿಂದೆ ಅಲ್ಲಿಂ ಎಲ್ಲಾ ಹುಡುಗರೂ ಹುಡುಗಿ ಯರೂ ಹರಿನಾಮ ಹಾಡುತ್ತಾ ಅವರ ಹಿಂದೆ ಹೋದರು. ರಸ್ತೆಯ ಕೆಳಗೆ ನೀರು ಸುರಿಯುತ್ತಿದ್ದ ನಾಲೆಯ ಹತ್ತಿರ ಕಾದಿದ್ದ ಒಂದು ವಿಷಪೂರಿತ ಹಾವು ಈ ದೃಶ್ಯವ ನ್ನು ಕಂಡು ಆನಂದಗೊಂಡು ನಾರದರು ಒಬ್ಬರೇ ಇದ್ದಾಗ, ಅವರನ್ನು ಶ್ರೀ ಹರಿಯ ಅನುಗ್ರಹ ಪಡೆಯಲು ಏನು ಮಾಡಬೇಕೆಂದು ಕೇಳಿತು. " ಯಾವ ಪ್ರಾಣಿ ಗೂ ಹಿಂಸೆ ಮಾಡದಿರು ' ಎಂದು ನಾರದರು ಹೇಳಿದರು !

ತನ್ನನ್ನು ಕಂಡೊಡನೆಯೇ ಎಲ್ಲರೂ ಓಡಿಹೋಗುತ್ತಿದ್ದ ಆ ಹಾವು ನಾರದರ ಆಜ್ಞೆಯಂತೆ, ಯಾವ ಪ್ರಾಣಿಯನ್ನೂ ಕಡಿಯಲು ಅಥವಾ ತೊಂದರೆ ಮಾ ಡ ಲು ಪ್ರಯತ್ನಿಸದಿತ್ತು. ಇದನ್ನು ಕಂಡ ಹುಡುಗರು ಅದು ತೊಂದರೆ ಮಾಡುವುದಿಲ್ಲ ವೆಂದೂ, ಅದು ವಿಷದ ಹಲ್ಲನ್ನು ಕಳೆದುಕೊಂಡಿದೆಯೆಂದೂ ಭಾವಿಸಿ, ಅದನ್ನು ಕಲ್ಲಿ ನಿಂದ, ಕಡ್ಡಿಯಿಂದ ಹೊಡೆಯಲು ಪ್ರಾರಂಭಿಸಿದರು. ಅದು ತನ್ನ ಪಾಡಿಗೆ ತಾನು ಇರಲು ಅವಕಾಶವಿಲ್ಲದಂತೆ ಮಾಡಿದರು. ಅದಕ್ಕೆ ಜೀವಿತ ಸಹಿಸದಂತಾಯಿತು ; ಮೈ ಯೆಲ್ಲಾ ಊದು, ಗಾಯಗಳಿಂದ ಕೂಡಿದು. ಮತ್ತೊಂದು ದಿನ ನಾರದರು ಅತ್ತ ಕಡೆ ಹೋಗುತ್ತಿದ್ದುದನ್ನು ಕಂಡ ಆ ಹಾವು " ಸ್ವಾಮಿ, ಸ್ವಲ್ಪವೂ ವಿರಾಮ ಕೊ ಡದೆ, 24 ಗಂಟೆಗಳಲ್ಲೂ ನನ್ನನ್ನು ಹೊಡೆದು ಪೀಡಿಸುತ್ತಿರುವರು ; ನಾನು ಅಹಿಂಸೆ ಮಾರ್ಗ ಅನುಸರಿಸಿದ್ದೇನೆ : ದಯವಾಡಿ ನನ್ನನ್ನು ಉಳಿಸಿ " ಎಂದಿತು

' ಯಾಕೆ ಹೀಗೆ : ನಾನು ಕಡಿಯಬಾರದೆಂದು ತಿಳಿಸಿದ್ದನೇ ಹೊರತು, ಬುಸು ಗುಟ್ಟುವುದನ್ನೂ ಹೆಡೆ ಆಡಿಸುವುದನ್ನೂ ಬೇಡವೆಂದಿರಲಿಲ್ಲವಲ್ಲಾ" ಎಂದರು ನಾರದರು.

ಹಾವು ಇದನ್ನು ತಿಳಿದುಕೊಂಡಿತು. ನಂತರ ಬುಸುಗುಟ್ಟುತ್ತಾ, ಹೆಡೆ ಆಡಿ ಸುತ್ತಾ, ನೆಗೆಯಲುಸಕ್ರಮಿಸಿತು. ಹುಡುಗರು ಹೆದರಿ ಹಾವು ಹೊಸ ವಿಷದ ಹಲ್ಲು ಪಡೆದಿವೆ, ಕಡಿದೀತು, ಎಂದು ಕೊಳ್ಳುತ್ತಾ ಓಟ ಹೊಡೆಯುತ್ತಿದ್ದರು. ನಂತರ ಹಾವು ಶಾಂತತೆಯಿಂದ ಇದ್ದಿತು.

ಗೋರಕ್ಷಣಕ್ಕೆ ಚಂದಾ ಮತ್ತು ಡೊನೇರ್ಷ ಪಾವತಿಮಾಡುವ ಅಡ್ರೆಸ್

1 ಶ್ರೀ ಅನಂತನರಸಿಂಹಯ್ಯಂಗಾರ್, ಶಾಸ್ತ್ರಧರ್ಮಪ್ರಚಾರ ಸಭಾ
ಹೊಂಗನೂರು, ಚಾಮರಾಜನಗರ ತಾಲ್ಲೂಕ
2 ಶ್ರೀ ಬಿ ಜಿ ಶಾಸ್ತ್ರಿ, ಆಥರ್ ಮತ್ತು ಅಸ್ಟ್ರಾಲಜರ್, 180 ನ್ಯೂ ಬ್ಲಾಕ್,
ವಿದ್ಯಾರಣ್ಯಪುರಂ, ಮೈಸೂರು.
3. ಡಾ || ಪಿ ಎಸ್ ನಾರಾಯಣ್, ಮತ್ತು ಪಿ ಎಸ್. ವಿಶ್ವನಾಥ್,
ಪ್ರಾಣಿದಯಾ ಪ್ರಚಾರಕರು, 320 – 5 ನೆ ಬ್ಲಾಕ್, ಜಯನಗರ, ಬೆಂಗಳೂರು
4 ಗೋರಕ್ಷಣ ಆಫೀಸ್, ಸತ್ಯವಾದಿ ಪ್ರೆಸ್, ಚಾಮರಾಜಪುರಂ, ಮೈಸೂರು

S H A K T I

S U D H A

A Superb Tonic

ದೇಶದ ಹಿತಕಾಗಿ
ಕುಟುಂಬ ಯೋಜನೆ

ಅಖಿಲ ಭಾರತದಲ್ಲಿ ಕೂಡಲೇ
ಗೋವಧೆ ನಿಷೇಧವಾಗಲಿ

ವುಡ್‌ಲ್ಯಾಂಡ್ ಅನೋಘ 3ನೇ ವಾರ
ಶಿ ನ ಅನೋಘ ಪ್ರಾರಂಭ
ಓರ್ವ ಹೆಣ್ಣಿನ ಮನಕರಗುವ ಸನ್ನಿವೇಶಗಳಿಂದ ಕೂಡಿದ ಅನೋಘ ಕನ್ನಡ ಚಿತ್ರ

ಗೆಜ್ಜೆ ಪೂಜೆ

ನಟವರ್ಗ– ಕಲ್ಪನ, ಅಶ್ವತ್ಥ್, ಬಾಲಕೃಷ್ಣ, ಪಂಡರಿಬಾಯಿ
ನಿರ್ದೇಶನ : ಪುಟ್ಟಣ್ಣ ಕಣಗಾಲ್ ಸಂಗೀತ : ವಿಜಯ ಭಾಸ್ಕರ್
[ದಿನ 3 ಪ್ರದರ್ಶನಗಳು]

ಅಪೆರಾ— ಅನೋಘ 4ನೇ ವಾರ
.... ಅತ್ಯನೋಘ ಹಿಂದಿ ಚಿತ್ರ ....
ನನ್ನ ಪರಿಷ್ಪ

ನಿರ್ದೇಶನ ಟಿ. ಪ್ರಕಾಶರಾವ್ ಸಂಗೀತ ಕಲ್ಯಾಣಜಿ ಆನಂದಜಿ (ಕಲರ್)
ದಿನ 3 ಆಟಗಳು

Help The Gorakshana



ಗೋರಕ್ಷಣೆ ಮತ್ತು ಪ್ರಾಣಿದಯಾ ಕಾರ್ಯಗಳು ಹೆಚ್ಚಿಗಾಗಿ ನಡೆಯಲಿ
ಗೋರಕ್ಷಣಕ್ಕೆ ಬೆಂಬಲ ನೀಡಿ

Protect the Cow

Quality Printing — Neat Binding
Lakshminarasimha Press
Sivarampet, Mysore

Edited, Printed & Published by Dharmaprachara Nirata M S Krishna Rao (Proprietor) at the Satyavadi Press, Chamarajapuram, Mysore 4